**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.437/2022

**PW**. 8

**CW**. 20

**ಸಾಕ್ಷಿಯ ಹೆಸರು –ಕುಮಾರ ಡಿ ಆರ್**

**ತಂದೆಯ ಹೆಸರು –ಲೇ ರಾಮಕೃಷ್ಣೇಗೌಡ**

**ವಯಸ್ಸು –44 ವರ್ಷಗಳು** ದಿನಾಂಕ 10–12–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಆಹಾರ ನಿರೀಕ್ಷಕರು , ಕೆ ಆರ್ ನಗರ**

**ವಾಸಸ್ಥಳ –ಕೆ ಆರ್ ನಗರ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ–1 ಮತ್ತು 2 ನನ್ನ ಅತ್ತೆ ಮಾವ . ಮೃತ ಗೋಪಿ ನನ್ನ ಭಾವಮೈದುನ . 2018 ರಲ್ಲಿ 1 ನೇ ಆರೋಪಿಯನ್ನು ಗೋಪಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಮದುವೆ ಸಮಯದಲ್ಲಿ ಮೃತ ಗೋಪಿ ರೈಲ್ವೆ ಪೊಲೀಸ್ ಆಗಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ . ಆತನ ಮದುವೆಯಾದ ನಂತರ ಮಂಡ್ಯ ಕ್ಕೆ ವರ್ಗಾವಣೆ ಆಯಿತು. 1 ನೇ ಆರೋಪಿ ಒಪ್ಪದೆ ತನ್ನ ತವರು ಮನೆಯಲ್ಲಿದ್ದ ಕಾರಣ ಬೆಂಗಳೂರಿನಲ್ಲಿ ಇಬ್ಬರು ವಾಸ ಮಾಡಲಿಲ್ಲ. 1 ನೇ ಆರೋಪಿ ಹೇಳಿದ್ದರಿಂದ ಗೋಪಿಯು ಮಂಡ್ಯ ಕ್ಕೆ ವರ್ಗಾವಣೆ ಮಾಡಿಸಿಕೊಂಡಿದ್ದ. ಮೃತ ಗೋಪಿ ತನ್ನ ತಂದೆ ತಾಯಿ ಮನೆಗೆ ಒಬ್ಬನೆ ಬರುತ್ತಿದ್ದ. 2019 ರಲ್ಲಿ 1 ನೇ ಆರೋಪಿ ನೀಡಿದ ಮಾನಸಿಕ ಕಿರುಕುಳದಿಂದ ಗೋಪಿ ಅತ್ಮಹತ್ಯೆ ಮಾಡಿಕೊಂಡಿರುತ್ತಾನೆ. 1 ನೇ ಆರೋಪಿ ನನ್ನ ಜೊತೆ ಹೂಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದು ಗೋಪಿ ಹೇಳಿದ್ದ. ಆ ಬಗ್ಗೆ ಆರೋಪಿತರ ಮನೆಯಲ್ಲಿ ಪಂಚಾಯಿತಿ ಮಾಡಿದ್ದೆವು. ಗೋಪಿ ಮಂಡ್ಯ

ದಲ್ಲಿ ಮನೆ ಮಾಡಿದ ನಂತರ 1 ನೇ ಆರೋಪಿಯು ಗೋಪಿಯ ಜೊತೆ ಇರಲಿಲ್ಲ. ಆಗಾಗ್ಗೆ ತನ್ನ ತವರು ಮನೆಗೆ ಹೇಳದೆ ಕೇಳದೇ ಹೋಗುತ್ತಿದ್ದಳು ಎಂದು ಗೋಪಿ ನನಗೆ ಹೇಳಿದ್ದ.

ಗೋಪಿ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ಸಂಜೆ 7.00 ಗಂಟೆಗೆ ನನಗೆ ಗೊತ್ತಾಯಿತು.

**ಪಾಟೀಸವಾಲುಃ- ಆರೋಪಿತರ ಪರ ಶ್ರೀ ಈ ಬಿ ಆರ್ ವಕೀಲರಿಂದಃ-**

ಗೋಪಿ ಮದುವೆಯಾದ 1 ವರ್ಷದ ಒಳಗೆ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ. ಗೋಪಿ ಮದುವೆಯಾದ ನಂತರ 1 ನೇ ಆರೋಪಿಯನ್ನು ತನ್ನ ಅತ್ತೆ ಮಾವನ ಮನೆಗೆ ಕರೆದು ತವರು ಮನೆಗೆ ಕಳುಹಿಸಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿಯು ತನ್ನ ಅತ್ತೆ ಮಾವನ ಮನೆಗೆ ಹೋಗುತ್ತಿರಲಿಲ್ಲ. 1 ನೇ ಆರೋಪಿ ಗೋಪಿ ಜೊತೆ ಮದುವೆಯಾದ ನಂತರ ಹಬ್ಬ ಹರಿದಿನಗಳಲ್ಲಿ ಮಾತ್ರ ತನ್ನ ತವರು ಮನೆಗೆ ಹೋಗುತ್ತಿದ್ದಳು ಎಂದರೆ ಸರಿಯಲ್ಲ.ಗೋಪಿ ಮದುವೆಯಾದ ನಂತರ ಆತನನ್ನು ಎರಡು ತಿಂಗಳ ಅವಧಿಗೆ ಗುಜರಾತಿನ ಚುನಾವಣೆ ಕರ್ತವ್ಯಕ್ಕೆ ನೇಮಕ ಮಾಡಿದ್ದರು ಎಂದರೆ ಸರಿ .ಗೋಪಿ ತನ್ನ ಇಚ್ಛೆಯಂತೆ ಮಂಡ್ಯದಲ್ಲಿ ಮನೆ ಮಾಡಿದ್ದ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಮತ್ತು ಗೋಪಿಯ ಮದುವೆಯಾದ ನಂತರ ಅವರಿಬ್ಬರು ಅನ್ಯೋನ್ಯವಾಗಿ ಜೀವನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಗೋಪಿ ತನ್ನ ಜೀವಂತ ಕಾಲದಲ್ಲಿ 1 ನೇ ಆರೋಪಿ ಕಿರುಕುಳ ನೀಡಿದ ಬಗ್ಗೆ ದೂರು ನೀಡಿಲ್ಲ ಎಂದರೆ ಸರಿ. ಆರೋಪಿತರ ಮನೆಯಲ್ಲಿ ಪಂಚಾಯಿತಿ ಸೇರಿದ ದಿನಾಂಕ ನೆನಪಿಲ್ಲ. ಯಾವುದೇ ಪಂಚಾಯಿತಿ ಮಾಡದಿದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಗೋಪಿ ಸರ್ಕಾರಿ ನೌಕರನಾದ ಕಾರಣ ಆತನ Death Benefit ಗಳು 1 ನೇ ಆರೋಪಿಗೆ ಸಿಗಬಾರದೆಂಬ ಕಾರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸ್ವಂತ ಊರು ಕೆ ಆರ್ ನಗರ ತಾಲ್ಲೂಕಿನ

ದೊಡ್ಡಕೆಂಪೇಗೌಡನಕೊಪ್ಪಲು. ಆರೋಪಿತರು ಗೋಪಿಗೆ ಯಾವುದೇ ಕಿರುಕುಳ ನೀಡದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.